ಮುಂದಿನ ಪೇಶೆಂಟ್ ಕಡೆ ನಡೆದಿದ್ದರು.

ಮೊದಲ ಬಾರಿಗೆ ಒಂದು ಕ್ಷಣ ಇಡೀ ಐಸಿಯುವನ್ನು ಕಣ್ತುಂಬಿಕೊಂಡಿದ್ದೆ. ಎಲ್ಲಾ ಬೆಡ್‌ಗಳೂ ಭರ್ತಿಯಾಗಿವೆ. ಹಾಸಿಗೆಗಳ ಮೇಲೆ ರೋಗಿಗಳನ್ನು ಏನೇನೋ ಯಂತ್ರಗಳನ್ನು ಹಾಕಿ ಬಂಧಿಸಿದಂತೆ ಭಾಸವಾಗುತ್ತಿದೆ. ರೋಗಿಗಳಿಗೆ ಮಾತನಾಡಲೂ ಅವಕಾಶವಿಲ್ಲದಂತೆ ಬಾಯಿಗಳಿಗೆ ವೆಂಟಿಲೇಟರ್ ಹಾಕಲಾಗಿದೆ. ಕೆಲವರಿಗೆ ಕತ್ತಿನ ಮೂಲಕ ಟ್ರಾಕಿಯೊಸ್ಟೊಮಿ ಮೂಲಕ ಆಕ್ಸಿಜನ್, ಮೂಗಿನಲ್ಲಿ ಪೈಪುಗಳನ್ನು ಹಾಕಿ ಲಿಕ್ವಿಡ್ ಫುಡ್, ಕೈ ನರಗಳ ಮೂಲಕ ದ್ರವ ರೂಪದ ಔಷಧಿಗಳನ್ನು ಕೊಡಲಾಗುತ್ತಿದೆ. ಹಿಂದೆಂದೂ ಅಂಥ ದೃಶ್ಯಗಳನ್ನು ನೋಡುವ ಪ್ರಮೇಯ ನನಗೆ ಬಂದಿರಲಿಲ್ಲ. ನಿಜವಾಗಿಯೂ ಈ ಐಸಿಯು ಯಮಧರ್ಮರಾಯನ ವರ್ಕ್ ಶಾಪಿನಂತೆಯೂ, ಡಾಕ್ಟರುಗಳು ಮತ್ತು ನರ್ಸ್‌ಗಳು ಯಮ ಭಟರಂತೆಯೂ ಕಂಡು ಬಂದಿದ್ದರು. ಅಲ್ಲಿಂದ ಓಡಿಹೋಗೋಣವೆನಿಸಿ ಕ್ಷಣಾರ್ಧದಲ್ಲಿ ಅಟೆಂಡರ್ಸ್ ಲಾಂಜ್‌ನಲ್ಲಿ ಕೂತಿದ್ದೆ. ಕ್ಷಣ ನನ್ನ ಮನಸ್ಸು ಹದಿನೈದು ವರ್ಷಗಳ ಹಿಂದೆಕ್ಕೆ ಜಾರಿತ್ತು.

ಅಂದು ನಾನು ಆಫೀಸಿನಿಂದ ಮನೆಗೆ ಬಂದಾಗ ಊರಿನಿಂದ ನಮ್ಮಣ್ಣ ಮತ್ತು ನಮ್ಮ ಹೊಲಗದ್ದೆಗಳಲ್ಲಿ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದ ಲಕ್ಷ್ಮೀನರಸ ಬಂದಿದ್ದರು. ಲಕ್ಷ್ಮೀನರಸನ ಹೆಂಡತಿಯನ್ನು ವಾಣಿವಿಲಾಸ ಆಸ್ಪತ್ರೆಗೆ ಅಡ್ಮಿಟ್ ಮಾಡಿ ಬಂದಿದ್ದರು. ಆಕೆಗೆ ಗರ್ಭ ಕೋಶದ ಕ್ಯಾನ್ಸರ್ ಆಗಿತ್ತಂತೆ. ಆಪರೇಷನ್ ಮಾಡದಿದ್ದರೆ ಬದುಕುಳಿಯುವುದು ಕಷ್ಟವಂತೆ. ವಿಪರೀತ ರಕ್ತಸ್ರಾವವಾಗಿ ಆರೇಳು ಬಾಟಲು ರಕ್ತ ಕೊಡಬೇಕಂತೆ. ಸದಾ ನಗುತ್ತಾ, ಇತರರನ್ನೂ ನಗಿಸುತ್ತಾ ಆಯಾಸ ಕಾಣದೆ ಕೆಲಸ ಮಾಡುತ್ತಿದ್ದ ಲಕ್ಷ್ಮೀನರಸನ ಮುಖದಲ್ಲಿ ಆತಂಕ ಮಡುಗಟ್ಟಿತ್ತು. ಕಾಫಿ ಕುಡಿದು ಆಸ್ಪತ್ರೆಗೆ ಹೊರಟವನೊಂದಿಗೆ ಚಂದ್ರಮಳೂ ಹೊರಟು ನಿಂತಿದ್ದಳು. ಡಾಕ್ಟರನ್ನು ಭೇಟಿಯಾಗಿ ಮಾತನಾಡಿದಾಗ 'ವಿಪರೀತ ರಕ್ತಸ್ರಾವವಾಗಿದೆ. ಹಾಗಾಗಿ ಪೇಶೆಂಟ್ ತುಂಬಾ ಸುಸ್ತಾಗಿದಾರೆ. ಆರೇಳು ಬಾಟಲ್ ರಕ್ತ ಕೊಡಬೇಕು ಮತ್ತು ಗರ್ಭಕೋಶದ ಸರ್ಜರಿ ಮಾಡ್ಬೇಕು. ಕನಿಷ್ಠ ಮುವತ್ತೈದು ಸಾವಿರದಿಂದ ನಲವತ್ತು ಸಾವಿರ ಖರ್ಚಾಗುತ್ತದೆ. ನೀವು ರೆಡಿಯಿದ್ದರೆ ಮುಂದುವರೆಯುತ್ತೇವೆ' ಎಂದಾಗ ನನ್ನ ಮುಖದಲ್ಲಿ ಬೆವರು ಕಿತ್ತುಕೊಂಡಿತ್ತು. ನನ್ನ ಪರಿಸ್ಥಿತಿಯನ್ನು ಗಮನಿಸಿದ ಚಂದ್ರಮ ನನ್ನ ಕೈ ಹಿಸುಕುತ್ತಾ ಡಾಕ್ಟರ್‌ಗೆ, 'ಆಯಿತು ಮೇಡಮ್ ನಾಳೆ ಮಧ್ಯಾಹ್ನ ಕಟ್ತೀವಿ ನೀವು ಪ್ಲೀಸ್ ಮುಂದುವರೆಯಿರಿ' ಎಂದು ಹೇಳಿದ್ದಳು. ತನ್ನೆರಡು ಬಳೆಗಳನ್ನು ಇಟ್ಟು ಆಸ್ಪತ್ರೆಗೆ ದುಡ್ಡು ಕಟ್ಟಿ ಬಂದಿದ್ದಳು. ಲಕ್ಷೀನರಸನ ಹೆಂಡತಿಗೆ ಆಪರೇಷನ್ ಆಗಿ ಆರೋಗ್ಯದಿಂದ ಊರಿಗೆ ಹಿಂತಿರುಗಿದ್ದಳು. ಆರು ತಿಂಗಳ ನಂತರ ಚಂದ್ರಮ ಬಳೆಗಳನ್ನು ಬಿಡಿಸಿಕೊಂಡಿದ್ದಳು. ಮುಂದೆ ಲಕ್ಷ್ಮೀನರಸನ ಹೆಂಡತಿ ಗ್ರಾಮ ಪಂಚಾಯಿತಿ ಎಲೆಕ್ಷನ್‌ನಲ್ಲಿ ಗೆದ್ದಿದ್ದಲ್ಲದೆ ಪಂಚಾಯಿತಿ ಉಪಾಧ್ಯಕ್ಷೆ ಕೂಡ ಆಗಿದ್ದಳು. ನಾವು ಊರಿಗೆ ಹೋದಾಗಲೆಲ್ಲ ಮನೆಯ ಹತ್ತಿರ ಬಂದು ನನ್ನ ಹೆಂಡತಿಯ ಕಾಲಿಗೆ ಬೀಳಲು ಬರುತ್ತಿದ್ದಳು. 'ಆ ಪುಣ್ಯಾತ್ಗಿತ್ತಿ ಇಲ್ಲದಿದ್ರೆ ಇಷ್ಟೊತ್ತಿಗೆ ನಾನು ಸತ್ತು ಸುಣ್ಣ ಆಗಿರ್ತಿದ್ದೆ' ಎಂದು ಆಕೆ ಊರಾದ ಊರೆಲ್ಲಾ ಹೇಳಿಕೊಂಡು ತಿರುಗಿದ್ದಳು. ಓದುವವರಿಗೆ, ಬಡವರ ಮದುವೆಗಳಿಗೆ ತನ್ನ ಕೈಲಾದಷ್ಟು ಸಹಾಯ ಮಾಡುತ್ತಿದ್ದ ಚಂದ್ರಮ ಈಗ ಆಸ್ಪತ್ರೆಯ ಐಸಿಯು ಎಂಬ ನರಕದಲ್ಲಿ ಏಕೆ ಪ್ರಜ್ಞೆಯಿಲ್ಲದೆ ಮಲಗಿದ್ದಾಳೆಂದು ಸ್ವರ್ಗ, ನರಕ, ಪುನರ್ಜನ್ಮ ಮುಂತಾದ ಅತಾರ್ಕಿಕ ಸಂಗತಿಗಳಲ್ಲಿ ನಂಬಿಕೆಯಿಲ್ಲದ ನನಗೆ ಒಮ್ಮೊಮ್ಮೆ ವಿಸ್ಮಯದ ಸಂಗತಿಯಾಗಿಯೂ ಮತ್ತೊಮ್ಮೊಮ್ಮೆ ನಿರಾಸಕ್ತಿಯ ಸಂಗತಿಯಾಗಿಯೂ ಗೊಂದಲದಲ್ಲಿ ಒದ್ದಾಡುತ್ತೇನೆ.

ನರತಜ್ಞ ಡಾಕ್ಟರ್ ವಿಷ್ಣುಬ್ರಹ್ಮ ಕಂಪ್ಯೂಟರ್ ಪರದೆಯ ಮೇಲೆ ಕಣ್ಣು ನೆಟ್ಟಿದ್ದವರು ನಾನು ಒಳ ಪ್ರವೇಶಿಸಿದ್ದನ್ನು ಗಮನಿಸಿ ಕನ್ನಡದ ಒಳಗಿನಿಂದ ಪಿಳಿಪಿಳಿ ನೋಡುತ್ತಾ 'ಕುಳಿತುಕೊಳ್ಳಿ ನಿಮ್ಮ ಕೇಸನ್ನೇ ನೋಡುತ್ತಿದ್ದೇನೆ' ಎಂದಿದ್ದರು. ವಿಷ್ಣುಬ್ರಹ್ಮ ಎಂಬ ಹೆಸರನ್ನು ಇದೇ ಮೊದಲು ನಾನು ಕೇಳುತ್ತಿದ್ದದ್ದು. ಅಗಲ ಕಂಪ್ಯೂಟರ್ ಪರದೆಯ ಕಡೆಗೊಮ್ಮೆ ಹಾಗೂ ಅವರ ಕನ್ನಡದೊಳಗಿನ ಗುಡ್ಡೆಗಳ ಕಡೆಗೊಮ್ಮೆ ಆಸೆಗಣ್ಣಿನಿಂದ ನೋಡುತ್ತಾ 'ಥ್ಯಾಂಕ್ಯೂ ಸರ್' ಎಂದು ಕುಳಿತುಕೊಂಡಿದ್ದೆ. 'ಬ್ರೈನ್ ಗೆ ಅಂಥ ಡ್ಯಾಮೇಜ್ ಆಗಿರುವುದೇನೂ ಎಂ.ಆರ್.ಐ ಸ್ಕ್ಯಾನ್‌ನಲ್ಲಿ ಕಂಡು ಬರುತ್ತಿಲ್ಲ. ಆದರೆ ಪ್ರಜ್ಞೆಯನ್ನು ಯಾವಾಗ ಬ್ರೈನ್ ರೀಗೈನ್ ಮಾಡುತ್ತೆ ಅನ್ನೋದನ್ನ ಎಕ್ಸಾಕ್ಟ್ ಆಗಿ ಹೇಳಲಿಕ್ಕೆ ಯಾವ ಸ್ಪೆಷಲಿಸ್ಟ್ ಗೂ ಸಾಧ್ಯವಿಲ್ಲ.